ಅಥವಾ ತನ್ನ ಕೀಳರಿಮೆಯೇ? ತಾನು ಬಡತನದಿಂದ ಬಂದವನು, ಅವಳು ಮಧ್ಯಮವರ್ಗದಿಂದ ಬಂದವಳು ಎನ್ನುವ ಅಂತರವೇ? ತಾನು ಚಿಕ್ಕ ಊರಿನವನು, ಅವಳು ದಿಲ್ಲಿಯವಳು ಎನ್ನುವ ಬಿರುಕೇ? ಭಾಷೆಯ ತೊಡಕೇ? ಧರ್ಮದ ಹಂಗೇ? ತನಗಿಂತ ವಯಸ್ಸಿನಲ್ಲಿ ದೊಡ್ಡವಳು ಎನ್ನುವುದೇ? ತಾನಿನ್ನೂ ಆಗ ತಂದೆಯಾಗಲು ತಯಾರಿರಲಿಲ್ಲವೇ? ಅವಳಿಗೆ ಇನ್ನೊಬ್ಬ ಬಾಯ್‌ಫ್ರೆಂಡ್ ಸಿಕ್ಕಿದ್ದಿರಬಹುದೇ? ತಾನು ಅವಳ ಮೊದಲ ಪ್ರಿಯಕರನಲ್ಲ ಎನ್ನುವ ತನ್ನ ಕೊರಗೇ?

ಕಾರನ್ನು ನಿಲ್ಲಿಸಿ, ಆಸ್ಪತ್ರೆಗೆ ಹೋಗುತ್ತಿದ್ದಂತೆಯೇ ರಕ್ತ ಮೂತ್ರ ಪರೀಕ್ಷೆಗಳನ್ನು ಕೊಟ್ಟು ಸಿ.ಟಿ ಸ್ಕ್ಯಾನ್ ಮಾಡಿಸಿಕೊಂಡ. ಒಂದು ಸಣ್ಣ ಕಿಡ್ನಿ ಕಲ್ಲು ಇರಬಹುದು ಎಂದುಕೊಂಡಿದ್ದು ಸುಳ್ಳಾಗಿತ್ತು. ಮೊದಲ ವರ್ಷದ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗೂ ಕಾಣುವಷ್ಟು ದೊಡ್ಡ ಕ್ಯಾನ್ಸರ್ ಗಡ್ಡೆ ಎಡಕಿಡ್ನಿಯಲ್ಲಿ ಇತ್ತು! ಒಂದು ಕ್ಷಣ ಕಣ್ಣಿಗೆ ಕತ್ತಲೆ ಬಂದಂತಾಯಿತು. ಕಣ್ಣುಮುಚ್ಚಿ ಕೂತ. ಗೆಳೆಯ ರೇಡಿಯಾಲಾಜಿಸ್ಟ್ ಚಾಟರ್ಜಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಪ್ರಾಣೇಶನೇ ಮೌನ ಮುರಿದು, "ಗಡ್ಡೆ ನನಗೂ ಕಾಣುತ್ತಿದೆ, ಕ್ಯಾನ್ಸರ್ ಎಲ್ಲೆಲ್ಲಿ ಹರಡಿದೆ ನೋಡು" ಎಂದ. "ಬಹುಶಃ ಮೂಳೆಗಳಿಗೆ ಹರಡಿದೆ ಅನ್ಸುತ್ತೆ" ಎಂದ ಚಾಟರ್ಜಿ. ಈ ರೇಡಿಯಾಲಾಜಿಸ್ಟುಗಳು 'ಬಹುಶಃ ಅಂದರೆ ಖಂಡಿತ' ಎನ್ನುವುದು ಪ್ರಾಣೇಶನಿಗೆ ಗೊತ್ತಿಲ್ಲದ ಮಾತೇನಲ್ಲ. ಚಾಟರ್ಜಿಗೆ ಥ್ಯಾಂಕ್ಸ್ ಹೇಳಿ ಸಾಯಂಕಾಲದ ಪಾರ್ಟಿಯನ್ನು ಇನ್ನೊಮ್ಮೆ ನೆನಪಿಸಿ ಬೀಳ್ಕೊಟ್ಟ.

ಪದ್ಮಜಾಳ ಮೆಸೇಜು ಬಂದಿತ್ತು, 'ಸಂಜೆಯ ಪಾರ್ಟಿಗೆ ರೆಡಿಯಾಗಲು ಪಾರ್ಲರಿಗೆ ಹೋಗುತ್ತಿದ್ದೇನೆ, ಫ್ರಿಡ್ಜ್‌ನಲ್ಲಿ ಚಿತ್ರಾನ್ನ, ಹಯಗ್ರೀವ ಇದೆ, ತಿನ್ನಲು ಮರೀಬೇಡ'. 'ಓಕೆ' ಎಂದು ಕಳಿಸಿದ. ಆಸ್ಪತ್ರೆಯಿಂದ ಮನೆಗೆ ಬಂದಾಗ ಮಧ್ಯಾಹ್ನ ಎರಡು ಗಂಟೆಯಾಗಿತ್ತು. ಪದ್ಮಜಾ ಮನೆಯಲ್ಲಿರಲಿಲ್ಲ. ಉಚ್ಚೆ ಮಾಡಿದ. ಈ ಸಲ ರಕ್ತವೇನೂ ಕಾಣಿಸಲಿಲ್ಲ. ಸ್ವಲ್ಪ ಸಮಾಧಾನ ಎನಿಸಿತು. ಸೋಫಾದಲ್ಲಿ ಕಣ್ಣುಮುಚ್ಚಿ ಕುಳಿತ. ಮನಸ್ಸು ಒಂಥರಾ ಖಾಲಿ ಖಾಲಿ ಎನಿಸಿತು. ಅಳು ಬರುತ್ತಿದೆ ಅಂದುಕೊಂಡ, ಆದರೆ ಕಣ್ಣೀರು ಬರುತ್ತಿಲ್ಲ. ಬೆಂಗಳೂರಲ್ಲಿ ಎಂ.ಬಿ.ಬಿ.ಎಸ್. ಸೀಟು ಸಿಕ್ಕಾಗ ಎರಡು ಜೊತೆ ಬಟ್ಟೆ ಹಿಡಕೊಂಡು ಹವಾಯಿ ಚಪ್ಪಲಿಯಲ್ಲಿ ಮನೆ ಬಿಟ್ಟು ಮಾಧ್ವಮಹಾಮಂಡಲದ ಹಾಸ್ಟೆಲಿನಲ್ಲಿ ಬಡಹುಡುಗರಿಗೆ ಸಿಗುವ ಫ್ರೀ ವಸತಿಯಲ್ಲಿ ಇದ್ದಿದ್ದು, ಅಲ್ಲಿನ ದಾನಿಗಳಿಂಡ ಮೆಡಿಕಲ್ ಕಾಲೇಜಿನ ಫೀಸ್ ಕಟ್ಟಿದ್ದು, ದಿನಾ ರಾತ್ರಿ ಹಾಸ್ಟೆಲಿನಲ್ಲಿ ಎಲ್ಲರಿಗೆ ಊಟ ಬಡಿಸಿ ನಂತರ ಊಟ ಮಾಡಿದ್ದು, ಹಾಸ್ಟೆಲಿನ ತರಹೇವಾರಿ ಕೆಲಸಗಳನ್ನು ಮಾಡಿ ಅವಮಾನದಲ್ಲಿ ಬೆಳೆದದ್ದು, ನಂತರ ಎಲ್ಲವನ್ನೂ ಮೆಟ್ಟಿನಿಂತು ಬದುಕು ಇಲ್ಲಿಯವರೆಗೂ ಬಂದದ್ದು... ಎಲ್ಲ ಧುತ್ತನೇ ನೆನಪಿಗೆ ಬಂದವು.

ಕಿಡ್ನಿ ಕ್ಯಾನ್ಸರ್ ಮೂಳೆಗಳಿಗೆ ಹಬ್ಬಿದೆ. ಇನ್ನೊಂದೆರೆಡು ವಾರದಲ್ಲಿ ಎಲ್ಲ ತಪಾಸಣೆಗಳನ್ನು ಮಾಡಿ ತನ್ನ ಚಿಕಿತ್ಸೆಯ ಬಗ್ಗೆ ಹೇಳುತ್ತಾರೆ. ಯಾವ ಯಾವ ಹೊಸ ಟ್ರೀಟ್‌ಮೆಂಟುಗಳು ಬಂದಿವೆ ಎಂಬುದನ್ನು ಹೇಳಿ ಭರವಸೆ ತುಂಬುತ್ತಾರೆ. ಇನ್ನೆಷ್ಟು ತಿಂಗಳು ತಾನೆ ತಾನು ಬದುಕಬಹುದು? ತನಗೆ ಹೀಗೆ ಆಗಿರುವುದನ್ನು ಪದ್ಮಜಾಳಿಗೆ ಹೇಗೆ ಹೇಳುವುದು, ಯಾವಾಗ ಹೇಳುವುದು, ಬಯಾಪ್ಸಿವರೆಗೂ ಕಾಯಬೇಕೇ? ಮಗ ಇಂದು ತಮ್ಮ ವೆಡ್ಡಿಂಗ್ ಆ್ಯನಿವರ್ಸರಿ ಪಾರ್ಟಿಗೆ ಬರುವುದಿಲ್ಲ ಎಂದು ಪದ್ಮಜಾಳಿಗೆ ಹೇಗೆ ಹೇಳುವುದು? ಏಕೆ ಬರುವುದಿಲ್ಲ ಎನ್ನುವುದನ್ನು ಹೇಗೆ ಹೇಳುವುದು? ಎಷ್ಟು ಹೊತ್ತು ಹಾಗೇ ಯೋಚಿಸುತ್ತ ಕುಳಿತಿದ್ದನೋ ಏನೋ, ಐಫೋನು 'ಟಂಗ್' ಎಂದಾಗ ಕಣ್ಣು ಬಿಟ್ಟ.

ಮಗ ಸತ್ಯನ ಮೆಸೇಜು, 'ಹ್ಯಾಪಿ ಆ್ಯನಿವರ್ಸರಿ, ಡ್ಯಾಡಿ'. ಹಿಂದಿನ ದಿನ ಇಷ್ಟೆಲ್ಲಾ ಆದ ಮೇಲೆ ಇದನ್ನು ಮಗನಿಂದ ನಿರೀಕ್ಷಿಸಿರಲಿಲ್ಲ. ಚಕ್ಕನೆ ಮಗನಿಗೆ ಫೋನ್ ಮಾಡಿದ. ಎದೆ ಡವ ಡವ ಹೊಡೆದುಕೊಳ್ಳತೊಡಗಿತು. ಮಗ ಫೋನ್ ಎತ್ತುವ ಖಾತ್ರಿ ಇರಲಿಲ್ಲ. ಆದರೆ, ಎತ್ತಿದ. "ಸಾರಿ ಸತ್ಯ, ಐ ಆಮ್ ವೆರಿ ವೆರಿ ಸಾರಿ. ದಯವಿಟ್ಟು ನಾನು ಮಾತಾಡುವುದನ್ನು ಫೋನ್ ಕಟ್